ವಸತಿ ಗೃಹಗಳ ದುರಸ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :- 35 (348)

ಶ್ರೀರಾಮಲಿಂಗರೆಡ್ಡಿ (ಜಯನಗರ)

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳ ವಸತಿ ಗೃಹಗಳ ಸಂಖ್ಯೆ ಎಷ್ಟು?:- ಬೆಂಗಳೂರಿನಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ ವಸತಿ ಗೃಹಗಳ ಸಂಖ್ಯೆ : 1910

2. ಇವುಗಳ ಪೈಕಿ ಹಲವಾರು ವಸತಿ ಗೃಹಗಳು ಸೋರುತ್ತಿರುವ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?:- ಕೆಲವು ವಸತಿ ಗೃಹಗಳು ಸೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

3. ಹಾಗಿದ್ದಲ್ಲಿ, ಎಲ್ಲಾ ಸರ್ಕಾರಿ ವಸತಿ ಗೃಹಗಳನ್ನು ಪರಿಶೀಲಿಸಿ, ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?:- ಅಧಿಕಾರಿಗಳಿಂದ ಕಾಲ ಕಾಲಕ್ಕೆ ನಡೆಯುವ ಪರಿಶೀಲನೆಯ ನಂತರ ವಸತಿ ಗೃಹಗಳನ್ನು ಲಭ್ಯವಿರುವ ಅನುದಾನದಲ್ಲಿ ದುರಸ್ತಿ ಮಾಡಲಾಗುತ್ತಿದೆ.

ಶ್ರೀ ಸಿ.ಎಂ. ಉದಾಸಿ

(ಲೋಕೋಪಯೋಗಿ ಸಚಿವರು)

ವಿಷಯ:- ಹುಬ್ಬಳ್ಳಿ-ಧಾರವಾಡದ ಹೊರವಲಯದಲ್ಲಿ ಬೈಪಾಸ್ ರಸ್ತೆ ಕೆಲಸವನ್ನು ಪೂರ್ಣಗೊಳಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 36(344)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ-ಧಾರವಾಡ ಹೊರ ವಲಯದಲ್ಲಿ ನಿರ್ಮಾಣವಾಗುತ್ತಿರುವ ಬೈಪಾಸ್ ರಸ್ತೆ ಕೆಲಸವನ್ನು 1996 ಮಾರ್ಚ್ ತಿಂಗಳ ಅಂತ್ಯದಲ್ಲಿ ಮುಕ್ತಾಯಗೊಳಿಸಿ ವಾಹನಗಳನ್ನು ಸದರಿ ರಸ್ತೆಯಲ್ಲಿ ಬಿಡಲಾಗುವುದು ಎಂದು ತಿಳಿಸಿರುವುದು ನಿಜವೇ:- ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆ ಮೊದಲನೇ ಹಂತ ಮಾರ್ಚ್ 1996 ರ ಅಂತ್ಯದಲ್ಲಿ ಪೂರೈಸಲಾಗುವುದು ಎಂದು ತಿಳಿಸಲಾಗಿತ್ತು.

ಆ) ಸದರಿ ರಸ್ತೆ ನಿರ್ಮಾಣ ಕೆಲಸ ಪೂರ್ಣಗೊಳಿಸಲಿಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು?:- ಮೆಟಲಿಂಗ್ ಕೆಲಸ ಬಹುತೇಕ ಮುಗಿದಿದ್ದು, ಡಾಂಬರೀಕರಣ ಕೈಗೊಳ್ಳಬೇಕಿದೆ.

ಇ) ಇನ್ನು ಎಷ್ಟು ಸಮಯದಲ್ಲಿ ಈ ರಸ್ತೆ ನಿರ್ಮಾಣ ಕೆಲಸ ಪೂರ್ಣಗೊಳ್ಳುವುದು:- ಹುಬ್ಬಳ್ಳಿ-ಧಾರವಾಡಕ್ಕೆ ಹೊರ ರಸ್ತೆ (ಮೊದಲ ಹಾಗೂ ಎರಡನೆ ಹಂತ) ಯನ್ನು ಖಾಸಗಿಯವರಿಂದ ಕೈಗೊಳ್ಳುವ ಬಗ್ಗೆ ಕೇಂದ್ರ ಸರ್ಕಾರವು ಪರಿಶೀಲಿಸುತ್ತಿದ್ದು, ಮೊದಲನೆ ಹಂತದ ಡಾಂಬರೀಕರಣದ

ಬಗ್ಗೆ ಕೇಂದ್ರದೊಂದಿಗೆ ಪತ್ರ ವ್ಯವಹಾರ ನಡೆಯುತ್ತಿದೆ. ಕೇಂದ್ರವು ಒಪ್ಪಿಗೆ ನೀಡಿದಲ್ಲಿ ಮೊದಲನೆ ಹಂತವನ್ನು ಡಾಂಬರೀಕರಣ ಸೇರಿದಂತೆ ಜನವರಿ 97 ರಲ್ಲಿ ಪೂರೈಸಲಾಗುವುದು.

ಶ್ರೀ ಸಿ. ಎಂ. ಉದಾಸಿ

(ಲೋಕೋಪಯೋಗಿ ಸಚಿವರು)

ವಿಷಯ:- ಹುಬ್ಬಳ್ಳಿಯ ಪಶು ವೈದ್ಯ ಆಸ್ಪತ್ರೆಯಲ್ಲಿ ಕ್ಷ-ಕಿರಣ ಯಂತ್ರ ದುರಸ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :- 37 (342)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ನಗರದಲ್ಲಿರುವ ಪಶು ವೈದ್ಯ ಆಸ್ಪತ್ರೆಯಲ್ಲಿ ಕಳೆದ 5 ವರ್ಷಗಳಿಂದ 'ಕ್ಷ' ಕಿರಣ ವಿಭಾಗದಲ್ಲಿ 'ಕ್ಷ' ಕಿರಣಯಂತ್ರ ತೆಗೆದು ಹಾಕಲಾಗಿದ್ದು ಆದಕ್ಕೆ ಕಾರಣವೇನು?

1. ದಿನಾಂಕ: 30- 11-95 ರಿಂದ 'ಕ್ಷ' ಕಿರಣ ಯಂತ್ರವು ಕೆಟ್ಟಿರುತ್ತದೆ.

2. ಇದು ದುರಸ್ತಿಯಾದ ನಂತರ ಪುನಃ ಸದರಿ ಪಶು ಆಸ್ಪತ್ರೆಯಲ್ಲಿ ಬಳಸಲಾಗುವುದು

ಆ) ಸದರಿ ಆಸ್ಪತ್ರೆಯಲ್ಲಿ ನೀರಿನ ವ್ಯವಸ್ಥೆ ಮತ್ತು ರಾತ್ರಿ ವೇಳೆ ದೀಪದ ವ್ಯವಸ್ಥೆ ಇಲ್ಲದೆ ಹಾಗೂ ಇತರ ಮೂಲಭೂತ ವ್ಯವಸ್ಥೆಗಳಿಲ್ಲದೆ ಇರುವುದರಿಂದ ಸರ್ಕಾರದವರ ಗಮನಕ್ಕೆ ಬಂದಿದೆಯೇ:- ಬಂದಿದೆ

ಇ) ಬಂದಿದ್ದರೆ ಅವುಗಳ ನಿವಾರಣೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?:- ದಿನಾಂಕ: 21-6-96 ರಂದು ಇದರ ಬಗ್ಗೆ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆ, ಹುಬ್ಬಳ್ಳಿ ರವರಿಗೆ ಬರೆದ ಪತ್ರದ ಮೇರೆಗೆ ದಿನಾಂಕ: 24-6-96 ರಂದು ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆ, ಹುಬ್ಬಳ್ಳಿ, ಇವರು ಸದರಿ ಪಶು ಆಸ್ಪತ್ರೆಗೆ ಭೇಟಿ ನೀಡಿ, ಕೈಗೊಳ್ಳಬೇಕಾದ ಕಾಮಗಾರಿಗಳ ಬಗ್ಗೆ ಪರಿಶೀಲಿಸಿ ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ಶ್ರೀ ಬಿ. ಬಿ. ನಿಂಗಯ್ಯ

(ಪಶುಸಂಗೋಪನಾ ರಾಜ್ಯ ಸಚಿವರು)

ವಿಷಯ:- ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಸೂಳ್ಯಗ್ರಾಮದಲ್ಲಿ ಪಶು ದವಾಖಾನೆಯ ಕಟ್ಟಡ ಉದ್ಘಾಟನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:- 38(343)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸವರೆ

ಅ) ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಸೂಳ್ಯ ಗ್ರಾಮದಲ್ಲಿ ಪಶು ದವಾಖಾನೆಯ ಕಟ್ಟಡದ ಕೆಲಸ ಪೂರ್ಣ ಮುಗಿದು 6-8 ತಿಂಗಳಾದರೂ ಇನ್ನೂವರೆಗೆ ಕಟ್ಟಡವನ್ನು ಉದ್ಘಾಟನೆ ಮಾಡದಿರಲು ಕಾರಣಗಳೇನು ಹಾಗೂ ಎಂದು ಉದ್ಘಾಟನೆ ಮಾಡಲಾಗುವುದು?:- ಕಟ್ಟಡಕ್ಕೆ ಕೆಲವು ಅಗತ್ಯ